## ಗ್ರಾಮೀಣ ನೀರು ಸರಬರಾಜು ಯೋಜನೆ:-

ಗ್ರಾಮೀಣ ಪ್ರದೇಶಗಳಲ್ಲಿ ಸುರಕ್ಷಿತ ಕುಡಿಯುವ ನೀರನ್ನು ಸರಬರಾಜು ಮಾಡುವುದು ಈ ಯೋಜನೆಯ ಮೂಲ ಉದ್ದೇಶವಾಗಿರುತ್ತದೆ.

2009-10 ನೇ ಸಾಲಿಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಕುಡಿಯುವ ನೀರು ಸರಬರಾಜು ಯೋಜನೆಗಳಿಗಾಗಿ ಮಾರ್ಚ್ 2010 ರ ಅಂತ್ಯಕ್ಕೆ ರಾಜ್ಯ ವಲಯದಡಿ ಸರ್ಕಾರದಿಂದ ರೂ.324.80 ಲಕ್ಷ.ಗಳು ಬಿಡುಗಡೆಯಾಗಿದೆ. ಭೌತಿಕವಾಗಿ ಕೊಳವೆ ನೀರು ಸರಬರಾಜು, ಕಿರು ನೀರು ಸರಬರಾಜು, ಕೊಳವೆ ನೀರು ಪುನ:ಶ್ಚೇತನ, ಕಿರು ನೀರು ಪುನ:ಶ್ಚೇತನ, ಕೈಪಂಪು ಕೊಳವೆ ಬಾವಿ ಯೋಜನೆ ಸೇರಿದಂತೆ, ಒಟ್ಟು 159 ಭೌತಿಕ ಪ್ರಗತಿಯನ್ನು ಸಾಧಿಸಿ, ವಿಶೇಷ ಅನುದಾನ ಮತ್ತು ನಿರ್ವಹಣಾ ವೆಚ್ಚವೂ ಸೇರಿದಂತೆ ರೂ. 324.80 ಲಕ್ಷ.ಗಳ ಆರ್ಥಿಕ ಪ್ರಗತಿಯನ್ನು ಸಾಧಿಸಲಾಗಿದೆ.

ಕೇಂದ್ರ ವಲಯ ಕಾರ್ಯಕ್ರಮದಡಿ ಜಿಲ್ಲೆಗೆ ಕುಡಿಯುವ ನೀರು ಸರಬರಾಜು ಯೋಜನೆಗಾಗಿ ಮಾರ್ಚ್ 2010 ರ ಅಂತ್ಯಕ್ಕೆ ಸರ್ಕಾರದಿಂದ ರೂ. 459.54 ಲಕ್ಷ.ಗಳು ಬಿಡುಗಡೆಯಾಗಿ ರೂ.459.54 ಲಕ್ಷ.ಗಳನ್ನು ವೆಚ್ಚ ಮಾಡಿ, ಭೌತಿಕವಾಗಿ 220 ಕಾಮಗಾರಿಗಳ ಪ್ರಗತಿಯನ್ನು ಸಾಧಿಸಲಾಗಿದೆ.

## ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ

ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆಯು ಭಾರತ ಸರ್ಕಾರದ ಬಡತನ ನಿವಾರಣ ರಾಷ್ಟ್ರೀಯ ಕಾರ್ಯಕ್ರಮವಾಗಿರುತ್ತದೆ. ಈ ಯೋಜನೆಯಡಿ ಗ್ರಾಮೀಣ ಭಾಗದ ಬಡಕುಟುಂಬಗಳ ಸದಸ್ಯರಿಗೆ ಆದಾಯ ಉತ್ಪನ್ನ ಹೆಚ್ಚಿಸಲು ಸ್ವಯಂ ಉದ್ಯೋಗ ಒದಗಿಸುವ ಕಾರ್ಯಕ್ರಮವಾಗಿರುತ್ತದೆ. ಈ ಕಾರ್ಯಕ್ರಮದಡಿ ಗ್ರಾಮೀಣ ಭಾಗದ ನಿರಂತರ ಉದ್ಯೋಗ ಮತ್ತು ನಿರಂತರ ಆದಾಯ ಒದಗಿಸುವ ವಿವಿಧ ಚಟುವಟಿಕೆಗಳನ್ನು ಸ್ವಸಹಾಯ ಗುಂಪುಗಳು ಸಾಮೂಹಿಕವಾಗಿ ನಿರ್ವಹಿಸಿ ಆದಾಯ ಉತ್ಪನ್ನವನ್ನು ಹೆಚ್ಚಿಸಿ ಬಡತನ ರೇಖೆಗಿಂತ ಮೇಲೆ ಬರಲು ಕ್ರಮವಹಿಸುವ ಕಾರ್ಯಕ್ರಮವಾಗಿದೆ. ಈ ಯೋಜನೆ ಅನುಷ್ಠಾನಕ್ಕೆ ಕೇಂದ್ರ ಹಾಗೂ ರಾಜ್ಯ ಸರ್ಕಾಋಗಳು 75:25 ಅನುಪಾತದಲ್ಲಿ ಅನುದಾನವನ್ನು ವಿನಿಯೋಗ ಮಾಡಲಾಗುವುದು.

1. ಸ್ವಸಹಾಯ ಗುಂಪುಗಳಿಗೆ ಬಲವರ್ಧನೆಗೆ ಸುತ್ತುನಿಧಿ ಹಾಗೂ ಲಿಂಕೇಜ್ ಸಾಲ ನೀಡುವುದು.
2. ಸ್ವಸಹಾಯ ಗುಂಪು ಹಾಗೂ ವೈಯಕ್ತಿಕ ಸ್ವರೋಜ್‌ಗಾರಿಗಳಿಗೆ ಉತ್ಪನ್ನ ಆಧಾರಿತ ಚಟುವಟಿಕೆ ಮೂಲಕ ಸ್ವಯಂ ಉದ್ಯೋಗ ಕಲ್ಪಿಸಲು ಸಾಲ ಸಹಾಯಧನ ನೀಡುವುದು.
3. ಬಿಪಿಎಲ್ ಸ್ವರೋಜ್‌ಗಾರಿಗಳಿಗೆ ಬುನಾದಿ ಹಾಗೂ ಕೌಶಲ್ಯ ತರಬೇತಿ ನೀಡುವುದು.
4. ಸ್ವಸಹಾಯ ಗುಂಪು ಮತ್ತು ವೈಯಕ್ತಿಕ ಸ್ವರೋಜ್‌ಗಾರಿಗಳ ಉತ್ಪಾದಿಸುವ ಉತ್ಪನ್ನಗಳಿಗೆ ಮಾರುಕಟ್ಟೆ ಹಾಗೂ ಇತರೆ ಮೂಲಭೂತ ಸೌಲಭ್ಯ ಒದಗಿಸುವುದು.

2009-10ನೇ ಸಾಲಿಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಕೇಂದ್ರ ಸರ್ಕಾರದಿಂದ 112.87 ಲಕ್ಷ.ರೂಗಳು ಮತ್ತು ರಾಜ್ಯ ಸರ್ಕಾರದಿಂದ 29.44 ಒಟ್ಟು 142.31 ಲಕ್ಷ ರೂ.ಗಳ ಸ್ವೀಕೃತವಾಗಿರುತ್ತದೆ ಹಾಗೂ ಕಳೆದ ಸಾಲಿನ ಅಂತ್ಯದಲ್ಲಿ ಬಾಕಿ ಉಳಿದ ಮೊತ್ತ 56.62 ಲಕ್ಷ.ರೂಗಳನ್ನು ಸೇರಿ ಒಟ್ಟು ಲಭ್ಯವಾದ ಅನುದಾನದ ಮೊತ್ತ 198.93 ಲಕ್ಷ.ರೂ.ಗಳ ಅನುದಾನದಲ್ಲಿ ಈ ಕೆಳಕಂಡಂತೆ ವಿವಿಧ ಅಂಶಗಳಿಗೆ ಕಾರ್ಯಕ್ರಮ ಅನುಷ್ಠಾನಕ್ಕೆ ವಿನಿಯೋಗಿಸಲಾಗಿದೆ.

(ಲಕ್ಷ.ರೂ.ಗಳಲ್ಲಿ)

| ಕ್ರ. ಸಂ | ಅನುದಾನ ವಿನಿಯೋಗದ ವಿವರ | ಅನುದಾನ |
|---|---|---|
| ೧ | ಸ್ವಸಹಾಯ ಗುಂಪುಗಳಿಗೆ ಉತ್ಪನ್ನ ಆಧಾರಿತ ಚಟುವಟಿಕೆಗೆ ಸಹಾಯಧನ ನೀಡಿಕೆ | 95.73 |
| ೨ | ವೈಯಕ್ತಿಕ ಸ್ವರೋಜ್‌ಗಾರಿಗಳಿಗೆ ಉತ್ಪನ್ನ ಆದಾಯ ಚಟುವಟಿಕೆಗೆ ಸಹಾಯಧನ ನೀಡಿಕೆ | 2.08 |
| ೩ | ಬಿಪಿಎಲ್ ಸ್ವರೋಜ್‌ಗಾರಿಗಳಿಗೆ ಬುನಾದಿ ತರಬೇತಿಗೆ ವಿನಿಯೋಗವಾದ ಅನುದಾನ | 2.29 |
| ೪ | ಬಿಪಿಎಲ್ ಸ್ವರೋಜ್‌ಗಾರಿಗಳಿಗೆ ಕೌಶಲ್ಯ ತರಬೇತಿಗೆ ವಿನಿಯೋಗವಾದ ಅನುದಾನ | 9.89 |
| ೫ | ಸ್ವಸಹಾಯ ಗುಂಪುಗಳ ಬಲವರ್ಧನೆಗೆ ಸುತ್ತುನಿಧಿ ನೀಡಿದ ಅನುದಾನ | 10.02 |
| ೬ | ಮೂಲಭೂತ ಸೌಕರ್ಯದಡಿ ಮಾರುಕಟ್ಟೆ ಮಳಿಗೆಗಳ ನಿರ್ಮಾಣಕ್ಕೆ ನೀಡಿದ ಅನುದಾನ | 39.82 |
| ೭ | ಸ್ವಸಹಾಯ ಗುಂಪುಗಳಿಗೆ ಉತ್ಪನ್ನಗಳ ಮಾರಾಟಕ್ಕಾಗಿ ನೀಡಿರುವ ಪ್ರವಾಸಭತ್ಯ ಮತ್ತು ಇತರೆ ವೆಚ್ಚಗಳು | 3.75 |
| ೮ | ಫೆಸಿಲಿಟೇಟರ್ ಕಾರ್ಯನಿರ್ವಹಿಸಿದ ಸಂಸ್ಥೆಗೆ ನೀಡಿರುವ ಸೇವಾ ಶುಲ್ಕ | 7.93 |
| | **ಒಟ್ಟು** | **171.51** |

| ಕ್ರ. ಸಂ | ಕಾರ್ಯಕ್ರಮ ವಿವರ | ಭೌತಿಕ ಸಂಖ್ಯೆ | |
|---|---|---|---|
| | | ಸ್ವಸಹಾಯ ಗುಂಪು | ಸ್ವರೋಜ್‌ಗಾರಿಗಳ ಸಂಖ್ಯೆ |
| ೧ | ಸ್ವಸಹಾಯ ಗುಂಪುಗಳಿಗೆ ಉತ್ಪನ್ನ ಆಧಾರಿತ ಚಟುವಟಿಕೆಗೆ ಸಹಾಯಧನ ನೀಡಿರುವ ಸಂಖ್ಯೆ | ೭೮ | ೧೨೪೨ |
| ೨ | ವೈಯಕ್ತಿಕ ಸ್ವರೋಜ್‌ಗಾರಿಗಳಿಗೆ ಉತ್ಪನ್ನ ಆಧಾರಿತ ಚಟುವಟಿಕೆಗೆ ಸಾಲ ಹಾಗೂ ಸಹಾಯಧನ ಸೌಲಭ್ಯ ನೀಡಿರುವ ಸಂಖ್ಯೆ | - | ೨೩ |
| ೩ | ಬಿಪಿಎಲ್ ಸ್ವರೋಜ್‌ಗಾರಿಗಳಿಗೆ ಬುನಾದಿ ಹಾಗೂ ಕೌಶಲ್ಯ ತರಬೇತಿ ನೀಡಿದ ಸಂಖ್ಯೆ | ೮೦ | ೧೨೮೬ |
| ೪ | ಸ್ವಸಹಾಯ ಗುಂಪುಗಳ ಬಲವರ್ಧನೆಗೆ ಸುತ್ತುನಿಧಿ ನೀಡಿದ ಸ್ವಸಹಾಯ ಗುಂಪುಗಳ ಸಂಖ್ಯೆ | ೧೩೫ | ೨೦ ೨೫ |

ಒಟ್ಟಾರೆ ಪ್ರಸಕ್ತ ಸಾಲಿನಲ್ಲಿ 3290 ಬಿಪಿಎಲ್ ಸ್ವರೋಜ್‌ಗಾರಿಗಳಿಗೆ ವಿವಿಧ ಸೌಲಭ್ಯಗಳನ್ನು ಎಸ್‌ಜಿಎಸ್‌ವೈ ಯೋಜನೆಯಡಿ ನೀಡಲಾಗಿದೆ. ಅದರಲ್ಲಿ 3260 ಮಹಿಳೆಯರಿಗೆ; 1070 ಪರಿಶಿಷ್ಟ ಜಾತಿಯವರಿಗೆ ಮತ್ತು 150 ಪರಿಶಿಷ್ಟ ಪಂಗಡದವರಿಗೆ, 195 ಅಲ್ಪಸಂಖ್ಯಾತರಿಗೆ ಹಾಗೂ 62 ಅಂಗವಿಕಲ ಸ್ವರೋಜ್‌ಗಾರಿಗೆ ಯೋಜನೆ ವಿವಿಧ ಸೌಲಭ್ಯಗಳನ್ನು ಒದಗಿಸಲಾಗಿದೆ.

# ಸುವರ್ಣ ಗ್ರಾಮೋದಯ ಯೋಜನೆ:

ಸುವರ್ಣ ಗ್ರಾಮೋದಯ ಯೋಜನೆಯು ಒಂದು ವಿನೂತನ ಯೋಜನೆಯಾಗಿದ್ದು, ಗ್ರಾಮೀಣಾಭಿವೃದ್ಧಿಯಲ್ಲಿ ಆಳವಾದ ಮತ್ತು ಸಮಗ್ರವಾದ ದೂರದೃಷ್ಠಿಯನ್ನು ಹೊಂದುವ ಮೂಲಕ ಬಲಿಷ್ಠ ಗ್ರಾಮ ಸಮುದಾಯಗಳನ್ನು ಅಭಿವೃದ್ಧಿಪಡಿಸಬಹುದಾಗಿದೆ.

**ಈ ಯೋಜನೆಯ ಉದ್ದೇಶಗಳು:**

1. ಆಯ್ಕೆಯಾದ ಗ್ರಾಮಗಳ ಜನಜೀವನ ಗುಣಮಟ್ಟವನ್ನು ಉತ್ತಮಗೊಳಿಸಲು ಭೌತಿಕ ಪರಿಸರವನ್ನು ಮೇಲ್ದರ್ಜೆಗೇರಿಸುವುದು.
2. ಭೂಆಧಾರಿತ ಚಟುವಟಿಕೆಗಳಲ್ಲಿ ಆದಾಯವನ್ನು ಹೆಚ್ಚಿಸುವ ಸಾಮರ್ಥ್ಯವನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸುವುದು.
3. ಶಿಕ್ಷಣ, ಆರೋಗ್ಯ ಸೇವೆಗಳು, ಮಕ್ಕಳ ಯೋಗಕ್ಷೇಮ, ಸೌಲಭ್ಯ ಇತ್ಯಾದಿಗಳನ್ನು ಒಳಗೊಂಡಂತೆ.
4. ಮಾನವ ಸಂಪನ್ಮೂಲ ಅಭಿವೃದ್ಧಿಗಾಗಿ ಸಾಕಷ್ಟು ಹಾಗೂ ಪೂರ್ಣ ಪ್ರಮಾಣದಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು.
5. ವಿಶೇಷವಾಗಿ ವಿದ್ಯಾವಂತ ನಿರುದ್ಯೋಗಿ ಯುವಜನರಿಗೆ ಕೃಷಿಯೇತರ ಉದ್ಯೋಗಾವಕಾಶ ಗಳನ್ನು ಸೃಜಿಸುವುದು.
6. ಸ್ವಸಹಾಯ ಗುಂಪುಗಳು, ಸಾಂಸ್ಕೃತಿಕ ಸಂಘಗಳು ಮುಂತಾದವುಗಳ ಮೂಲಕ ಸಮುದಾಯ ಜಾಗೃತಿ ಮತ್ತು ಅಭಿವೃದ್ಧಿಗೆ ನೆರವಾಗುವುದು.

ಈ ಯೋಜನೆಯು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 2006-07ನೇ ಸಾಲಿನಿಂದ ಜಾರಿಗೆ ಬಂದಿದ್ದು, ಮೊದಲನೇ ಹಂತದಲ್ಲಿ ಜಿಲ್ಲೆಯ 31 ಗ್ರಾಮಗಳಿಗೆ ಸರ್ಕಾರವು ಅನುಮೋದನೆ ನೀಡಿದೆ. ಈ ಹಂತದಲ್ಲಿ ಆಯ್ಕೆಯಾದ ಗ್ರಾಮಗಳಿಗೆ ರೂ.1780.00 ಲಕ್ಷಗಳ ಆರ್ಥಿಕ ಗುರಿ ನಿಗಧಿಪಡಿಸಿದೆ. 2009-10 ನೇ ಸಾಲಿನವರೆಗೆ ಬಿಡುಗಡೆಯಾದ ರೂ. 1678.35 ಲಕ್ಷಗಳನ್ನ ಪೂರ್ಣ ಪ್ರಮಾಣದಲ್ಲಿ ವೆಚ್ಚ ಮಾಡಿ, ಗ್ರಾಮಗಳಲ್ಲಿ ಮೂಲಭೂತ ಸೌಲಭ್ಯ, ವಿವಿದ ತರಬೇತಿ ಮತ್ತು ಇತರೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ.

2009-10ನೇ ಸಾಲಿನಲ್ಲಿ 3ನೇ ಹಂತದಲ್ಲಿ 40 ಗ್ರಾಮಗಳನ್ನು ಆಯ್ಕೆ ಮಾಡಲಾಗಿದೆ. ಯೋಜನೆಯ ಮಾರ್ಗ ಸೂಚಿಯಂತೆ ಕ್ರಿಯಾ ಯೋಜನೆಯನ್ನು ಅನುಮೋದನೆ ನೀಡಿ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗಿದೆ.

**ವಸತಿ ಯೋಜನೆಗಳು:**

**ಇಂದಿರಾ ಆವಾಸ್ ಯೋಜನೆ:**

ಈ ಯೋಜನೆಯು ಕೇಂದ್ರ ಸರ್ಕಾರದ ಯೋಜನೆಯಾಗಿದ್ದು, ಗ್ರಾಮೀಣ ಪ್ರದೇಶಗಳಲ್ಲಿನ ಕಡುಬಡವರಿಗೆ ವಸತಿಯನ್ನು ಕಲ್ಪಿಸುವ ಯೋಜನೆಯಾಗಿರುತ್ತದೆ.

ಈ ಯೋಜನೆಯಲ್ಲಿ ಪರಿಶಿಷ್ಠ ಜಾತಿ / ಪರಿಶಿಷ್ಠ ಪಂಗಡದವರಿಗೆ ಶೇ. 60 ರಷ್ಟು, ಅಲ್ಪಸಂಖ್ಯಾತರಿಗೆ ಶೇ. 15 ರಷ್ಟು ಮತ್ತು ಇತರೆ ವರ್ಗದ ಜನವರಿಗೆ ಶೇ. 25 ರಷ್ಟು ಅನುಪಾತದಲ್ಲಿ ಮೀಸಲಾತಿಯನ್ನು ಕಲ್ಪಿಸಲಾಗಿದೆ. ಸದರಿ ಯೋಜನೆಯಡಿಯಲ್ಲಿ ಪ್ರತಿ ತಾಲ್ಲೂಕಿಗೆ ಗ್ರಾಮ ಪಂಚಾಯಿತಿವಾರು ಗುರಿಗಳನ್ನು ನೇರವಾಗಿ ಪರಿಶಿಷ್ಠ ಜಾತಿ / ಪರಿಶಿಷ್ಠ ಪಂಗಡ, ಇತರೆ ಜನ ಸಂಖ್ಯೆಗಳಿಗೆ ಅನುಗುಣವಾಗಿ ವಸತಿ ಯೋಜನೆಯ ಮಾರ್ಗಸೂಚಿಗಳನ್ವಯ ವ್ಯವಸ್ಥಾಪಕ ನಿರ್ದೇಶಕರು, ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ., ಬೆಂಗಳೂರು. ಇವರಿಂದ ನಿಗಧಿಪಡಿಸಲಾಗುವುದು. ಗ್ರಾಮ ಪಂಚಾಯಿತಿ ಸಭೆಗಳ ಮೂಲಕ ಇಂದಿರಾ ಆವಾಸ್ ಯೋಜನೆಯ ಮಾರ್ಗಸೂಚಿಗಳನ್ವಯ ಅರ್ಹ ಫಲಾನುಭವಿಗಳನ್ನು ನಿಯಮಾನುಸಾರ ಆಯ್ಕೆ ಮಾಡಿ, ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸಲ್ಲಿಸಿ, ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ ವ್ಯವಸ್ಥಾಪಕ ನಿರ್ದೇಶಕರು, ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ., ಬೆಂಗಳೂರು ಇವರಿಗೆ ಅನುಮೋದನೆಗಾಗಿ ಸಲ್ಲಿಸುವ ವ್ಯವಸ್ಥೆ ಇರುತ್ತದೆ.

ಇಂದಿರಾ ಆವಾಸ್ ವಸತಿ ಯೋಜನೆಯಲ್ಲಿ 2009-10ನೇ ಸಾಲಿನಲ್ಲಿನ ಆರ್ಥಿಕ ಸಾಧನೆ ಕೆಳಕಂಡಂತಿರುತ್ತದೆ.

**(ಲಕ್ಷ. ರೂಗಳಲ್ಲಿ)**

| **ಪ್ರಾರಂಭಿಕ ಶಿಲ್ಕು** | **ಬಿಡುಗಡೆ** | **ಒಟ್ಟು** | **ವೆಚ್ಚ** | **ಬಾಕಿ** | **ಶೇಕಡ** |
|---|---|---|---|---|---|
| 421.64 | 655.43 | 1077.07 | 725.66 | 351.41 | 48% |

**2007-08 ರಿಂದ 2009-10ರವರೆಗಿನ ಭೌತಿಕ ಪ್ರಗತಿ: (ಸಂಖ್ಯೆಗಳಲ್ಲಿ)**

| **ಕ್ರ. ಸಂ.** | **ವರ್ಷ** | **ಗುರಿ** | **ಸಾಧನೆ** | **ಪ್ರಗತಿ** | **ಬಾಕಿ** |
|---|---|---|---|---|---|
| 1 | 2007-08 | 938 | 923 | 10 | 5 |
| 2 | 2008-09 | 2508 | 1823 | 595 | 90 |
| 3 | 2009-10 | 3422 | 1339 | 1380 | 703 |
| | **ಒಟ್ಟು** | **6868** | **4085** | **1985** | **798** |

**ಆಶ್ರಯ ವಸತಿ ಯೋಜನೆ:**

ಈ ಯೋಜನೆಯಡಿಯಲ್ಲಿ ಮನೆಗಳ ಹಂಚಿಕೆಯಲ್ಲಿ ಪರಿಶಿಷ್ಠ ಜಾತಿ ಫಲಾನುಭವಿಗಳಿಗೆ ಶೇ. 40, ಪರಿಶಿಷ್ಠ ಪಂಗಡದ ಫಲಾನುಭವಿಗಳಿಗೆ ಶೇ. 10 ಮತ್ತು ಇತರೆ ವರ್ಗಕ್ಕೆ ಶೇ. 50 ರ ಅನುಪಾತದಲ್ಲಿ ಮೀಸಲಾತಿ ಕಲ್ಪಿಸಲಾಗಿದೆ. ಸದರಿ ಯೋಜನೆಯಲ್ಲಿ ಪ್ರತಿ ಮನೆಗೆ ರೂ. 40,000/- ಗಳ ಘಟಕ ವೆಚ್ಚ ನಿಗಧಿಪಡಿಸಿದ್ದು, ಪರಿಶಿಷ್ಠ ಜಾತಿ, ಪರಿಶಿಷ್ಠ ಪಂಗಡದ ಫಲಾನುಭವಿಗಳಿಗೆ ನೀಡಲಾಗುವ ಪೂರ್ಣ ಅನುದಾನ ಸಹಾಯಧನ ರೂಪದಲ್ಲಿರುತ್ತದೆ ಹಾಗೂ ಸಾಮಾನ್ಯ ವರ್ಗದ ಫಲಾನುಭವಿಗಳಿಗೆ ರೂ. 20,000/- ಗಳ ಸಹಾಯಧನ ಮತ್ತು ರೂ. 20,000/- ಸಾಲದ ರೂಪದಲ್ಲಿರುತ್ತದೆ.

ದಿನಾಂಕ: 31-03-2010 ರ ಅಂತ್ಯಕ್ಕೆ ಆಶ್ರಯ ಯೋಜನೆಯಲ್ಲಿ ಸಾಧಿಸಿದ ಪ್ರಗತಿ ವಿವರ ಕೆಳಕಂಡಂತಿದೆ.

**(ಲಕ್ಷ.ರೂಗಳಲ್ಲಿ)**

| ಕ್ರ. ಸಂ. | ವರ್ಷ | ಗುರಿ | ಸಾಧನೆ | ಪ್ರಗತಿ | ಬಾಕಿ | ಬಿಡುಗಡೆ | ವೆಚ್ಚ | ಬಾಕಿ |
|---|---|---|---|---|---|---|---|---|
| 1 | 2005-06 | 3494 | 3489 | 5 | - | 863.45 | 843.15 | 20.30 |
| 2 | 2006-07 | 5179 | 5069 | 108 | 2 | 1536.07 | 1507.41 | 28.66 |
| 3 | 2008-09 | 2747 | 1494 | 974 | 279 | 560.14 | 487.47 | 72.67 |
| | **ಒಟ್ಟು** | **11420** | **10052** | **1087** | **281** | **2959.66** | **2838.03** | **121.63** |

2007-08ನೇ ಸಾಲಿಗೆ ಗುರಿ ನಿಗಧಿಪಡಿಸಿರುವುದಿಲ್ಲ.

ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದ್ದ ಪ್ರಯುಕ್ತ 2008-09ರಲ್ಲಿ ಆಯ್ಕೆ ಮಾಡಿದ ಫಲಾನುಭವಿಗಳನ್ನು 2009-10ನೇ ಸಾಲಿಗೆ ಮುಂದುವರೆಸಲಾಗಿದೆ.

**ಅಂಬೇಡ್ಕರ್ ವಸತಿ ಯೋಜನೆ:**

ಈ ಯೋಜನೆಯು ಪರಿಶಿಷ್ಠ ಜಾತಿ / ಪರಿಶಿಷ್ಠ ಪಂಗದ ಫಲಾನುಭವಿಗಳಿಗೆ ಮಾತ್ರ ಮನೆ ನಿರ್ಮಾಣಕ್ಕಾಗಿ ನೀಡುವ ಸಹಾಯಧನವಾಗಿರುತ್ತದೆ. ಪ್ರತಿ ಮನೆ ನಿರ್ಮಾಣದ ಘಟಕ ವೆಚ್ಚ ರೂ.40,000/- ಗಳಾಗಿರುತ್ತದೆ.

ಈ ಯೋಜನೆಯಲ್ಲಿ ದಿನಾಂಕ: 31-03-2010 ಕ್ಕೆ ಸಾಧಿಸಿದ ಪ್ರಗತಿ ವಿವರ ಕೆಳಕಂಡಂತಿದೆ.

**(ಲಕ್ಷ.ರೂಗಳಲ್ಲಿ)**

| ಕ್ರ. ಸಂ. | ವರ್ಷ | ಗುರಿ | ಸಾಧನೆ | ಪ್ರಗತಿ | ಬಾಕಿ | ಬಿಡುಗಡೆ | ವೆಚ್ಚ | ಬಾಕಿ |
|---|---|---|---|---|---|---|---|---|
| 1 | 2007-08 | 407 | 377 | 30 | - | 112.25 | 106.41 | 5.84 |
| 2 | 2008-09 | 348 | 194 | 126 | 28 | 80.76 | 68.15 | 12.61 |
| | **ಒಟ್ಟು** | 755 | 571 | 156 | 28 | 193.01 | 174.56 | 18.45 |

2009-10ನೇ ಸಾಲಿನ ಆರ್ಥಿಕ ವರ್ಷದಲ್ಲಿ 2008-09ನೇ ಸಾಲಿನಲ್ಲಿ ನಿಗಧಿಪಡಿಸಿರುವ ಗುರಿಯಂತೆ ಫಲಾನುಭವಿಗಳ ಆಯ್ಕೆ ಮಾಡಲಾಗಿದೆ.